

'ನಿನಗಿಂತ ಎಮ್ಮೆನೇ ವಾಸಿ' ಅಂತ ಯಾರಾದರೂ ಬೈದರೆ ಯಾರಿಗೂ ಆಶ್ಚರ್ಯವಾಗುವುದಿಲ್ಲ. ಕೋತಿ ಕತ್ತೆ ನಾಯಿ ನರಿ ಹೀಗೆಲ್ಲ ಬೈಯುವ ಹಾಗಿಲ್ಲದಿದ್ದರೆ ಜೀವನ ಸ್ವಾರಸ್ಯವೇ ಇರುತ್ತಿರಲಿಲ್ಲ ಅನ್ನುವುದನ್ನು ಬೈಯುವವರು, ಬೈಸಿಕೊಳ್ಳುವವರು ಇಬ್ಬರೂ ಒಪ್ಪುತ್ತಾರೆ. ನಮ್ಮಲ್ಲಿ ಪ್ರಾಣಿಗಳನ್ನು ಮನುಷ್ಯರಿಗಿಂತಲೂ ಜಾಸ್ತಿ ಪ್ರೀತಿಸುವವರು ಇದ್ದು ಇಂಥ ಸೆಕೆಂಡರಿ ಸ್ಥಾನಗಳಿಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ 'ನಿನಗಿಂತ ಆ ಕಲ್ಲು ವಾಸಿ', 'ನಿನಗಿಂತ ಆ ಪ್ಲಾಸ್ಟಿಕ್ ಡಬ್ಬಿ ವಾಸಿ' ಅಂತ ಯಾರಾದರೂ ಅಂದಲ್ಲಿ ನಾನು ಕಲ್ಲಿಗಿಂತಲೂ ಕಡೆಯೇ, ಡಬ್ಬಿಗಿಂತಲೂ ಅತ್ತತ್ತವೇ ಅಂತ ಹುಬ್ಬೇರುತ್ತಾದರೂ ಅದಕ್ಕಿಂತಲೂ ಆ ಕ್ಷಣದಲ್ಲಿ 'ಅಲ್ಲಾ, ಹೀಗೆ ಯಾವಾವುದಕ್ಕೋ ಹೋಲಿಸಿ ಬೈಯುವ ಈ ಮನುಷ್ಯ ಕಲ್ಲು ಮತ್ತು ಡಬ್ಬಿಗಳಲ್ಲಿ ಏನೆಲ್ಲಾ ಪುರುಷಾರ್ಥಗಳನ್ನು ಕಂಡಿರಬಹುದು? ಜಡವಸ್ತುವಿಗೂ ಹೋಲಿಸುವಂಥ ಇವನೆಂಥ ಮನುಷ್ಯ. ಇವನು ಹುಚ್ಚನೇ, ಬೆಪ್ಪನೇ, ಅರುಳು ಮರಳೇ ಅನಿಸುವುದು ನಿಜ ತಾನೇ? ಆದರೂ ಇಂಥ ಸಂದರ್ಭದಲ್ಲಿ ಯಾರಿಗಾದರೂ ಮೆಂಟಲ್ ಎಂದು ಪಟ್ಟಕಟ್ಟುವ ಮೊದಲು ನೂರು ಸಲ ಯೋಚಿಸಬೇಕಾದ ಅಗತ್ಯವಿದೆ' ಎಂದು ಹೇಳಲೆಂದೇ ನಾನೀಗ ಕೂತಿರುವೆ.

ವಿಷಯವಿಷ್ಟೇ. ಯಾರಿಗಾದರೂ ಒಂದು ಬೆರಳು ತೋರಿಸಿದರೆ ಉಳಿದ ನಾಲ್ಕು ಬೆರಳುಗಳು ನಮ್ಮತ್ತ ಮುಖ ಮಾಡಿರುತ್ತವೆ ಎಂಬ ಶತಮಾನದ ಮಾತು ಗೊತ್ತಲ್ವಾ? ನಾವು ಹೇಳಿ ಕೇಳಿ ಪ್ರಾಣಿಗಳ ಜೊತೆ ಮಾತಾಡಿಕೊಂಡೇ ಬೆಳೆದವರು. ಅವು ಮಾತನಾಡುವುದಿಲ್ಲ ಎಂದು ಅಂದುಕೊಂಡರೆ ಪಂಚತಂತ್ರದ ಕಥೆಗಳನ್ನು ಎಲ್ಲಿಗೆ ಕಳಿಸುವುದು? ಈಗಲೂ ಎಷ್ಟೋ ಜನ ಆ ಪ್ರಾಣಿಗಳು ಹಾಗೇ ಮಾತಾಡಿಕೊಂಡು ಇರಲಿ ಎಂದು ಅಪೇಕ್ಷೆ ಪಡುತ್ತಾರೆ. ನನ್ನ ಹಿರಿಯ ಸಹೋದ್ಯೋಗಿಯೊಬ್ಬರು ಎರಡು ರಾಕ್ಷಸ ಸ್ವರೂಪಿ ನಾಯಿಗಳನ್ನು ಸಾಕಿದ್ದರು. ಅವರ ನಾಯಿಗಳನ್ನು ನಾವಾರೂ ನಾಯಿಯೆಂದು ಕರೆಯುವಂತಿರಲಿಲ್ಲ. ಹಾಗೆ ಕರೆದು ಬೈಸಿಕೊಂಡವರಿದ್ದರು. ಅವರು ಮೇಲಾಧಿಕಾರಿಯಾಗಿದ್ದರಿಂದ ಅವರ ನಾಯಿಗಳಿಗೂ ಒಂದೊಂದು ಪೊಸಿಷನ್ ಸಹಜವಾಗಿ ಇತ್ತು. ಅವರ